CAREERINDIA

| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 56 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 16

Total No. of Questions : 56 ] [ Total No. of Printed Pages : 16

**ಸಂಕೇತ ಸಂಖ್ಯೆ : 91-K**

**Code No. : 91-K**

# ವಿಷಯ : ಭಾರತೀಯ ಸಮಾಜಶಾಸ್ತ್ರ
# Subject : INDIAN SOCIOLOGY

( ಕನ್ನಡ ಭಾಷಾಂತರ / Kannada Version )

ದಿನಾಂಕ : 08. 04. 2013 ] [ Date : 08. 04. 2013

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಪರಮಾವಧಿ ಅಂಕಗಳು : 100 ] [ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 13. | | 25. | | 37. | | 49. | |
| 2. | | 14. | | 26. | | 38. | | 50. | |
| 3. | | 15. | | 27. | | 39. | | 51. | |
| 4. | | 16. | | 28. | | 40. | | 52. | |
| 5. | | 17. | | 29. | | 41. | | 53. | |
| 6. | | 18. | | 30. | | 42. | | 54. | |
| 7. | | 19. | | 31. | | 43. | | 55. | |
| 8. | | 20. | | 32. | | 44. | | 56. | |
| 9. | | 21. | | 33. | | 45. | | × | |
| 10. | | 22. | | 34. | | 46. | | × | |
| 11. | | 23. | | 35. | | 47. | | × | |
| 12. | | 24. | | 36. | | 48. | | × | |
| | | | | | | | | ***Total Marks*** | |
| **Total Marks in words** | | | | | | | | **Grand Total** | |

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

[ Turn over

www.careerindia.com

CAREERINDIA



*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 56 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ಸಮ್ನರ್ ಎಂಬ ಸಮಾಜಶಾಸ್ತ್ರಜ್ಞರ ಪ್ರಕಾರ ಎರಡು ಸಮೂಹಗಳು

   (A) ಪ್ರಾಥಮಿಕ ಸಮೂಹ ಮತ್ತು ಮಾಧ್ಯಮಿಕ ಸಮೂಹ

   (B) ಅಂತಃಸಮೂಹ ಮತ್ತು ಬಾಹ್ಯ ಸಮೂಹ

   (C) ಶಾಶ್ವತ ಮತ್ತು ತಾತ್ಕಾಲಿಕ ಸಮೂಹ

   (D) ಒಟ್ಟು ಸಮೂಹ ಮತ್ತು ವಿಚ್ಛಿನ್ನ ಸಮೂಹ

   *ಉತ್ತರ :* ______________________

2. ಬೌದ್ಧ ಧರ್ಮದ ಎರಡು ಪಂಗಡಗಳು

   (A) ತ್ರಿಪೀಟಕ ಮತ್ತು ಸಲ್ಲೇಖನ (B) ಹೀನಯಾನ ಮತ್ತು ಮಹಾಯಾನ

   (C) ತ್ರಿಪೀಟಕ ಮತ್ತು ದಿಗಂಬರ (D) ಸಲ್ಲೇಖನ ಮತ್ತು ಶ್ವೇತಾಂಬರ

   *ಉತ್ತರ :* ______________________

3. ಕ್ರಿ.ಶ. 1893 ರಲ್ಲಿ ಸರ್ವಧರ್ಮ ಸಮ್ಮೇಳನ ನಡೆದದ್ದು

   (A) ಅಮೆರಿಕಾದ ನ್ಯೂಯಾರ್ಕ್‌ನಲ್ಲಿ (B) ಯುನೈಟೆಡ್ ಕಿಂಗ್‌ಡಮ್‌ನ ಇಂಗ್ಲೆಂಡ್‌ನಲ್ಲಿ

   (C) ಅಮೆರಿಕಾದ ಶಿಕಾಗೋದಲ್ಲಿ (D) ಸೋವಿಯತ್ ರಷ್ಯಾದ ತಾಷ್ಕೆಂಟ್‌ನಲ್ಲಿ

   *ಉತ್ತರ :* ______________________

www.careerindia.com

4. ಹಿಂದೂ ಉತ್ತರಾಧಿಕಾರದ ಕಾಯಿದೆ ಘೋಷಿಸುವುದು

(A) ಗಂಡುಮಕ್ಕಳಿಗೆ ಮಾತ್ರ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು

(B) ಹೆಣ್ಣುಮಕ್ಕಳಿಗೆ ಮಾತ್ರ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು

(C) ಗಂಡು ಮತ್ತು ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲು

(D) ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡುಮಕ್ಕಳಿಗೆ ಹೆಚ್ಚು ಮತ್ತು ಹೆಣ್ಣುಮಕ್ಕಳಿಗೆ ಕಡಿಮೆ ಪಾಲು

*ಉತ್ತರ :* ______________________________

5. ಭಾರತದಲ್ಲಿ ಮತ ಚಲಾಯಿಸುವ ಹಕ್ಕನ್ನು ಪಡೆಯಲು ಕನಿಷ್ಠ ನಿಗದಿತ ವಯಸ್ಸು

(A) 18 ವರ್ಷಗಳು (B) 20 ವರ್ಷಗಳು

(C) 21 ವರ್ಷಗಳು (D) 16 ವರ್ಷಗಳು

*ಉತ್ತರ :* ______________________________

6. ಕ್ರಿ.ಶ. ಒಂದನೆ ಶತಮಾನದಲ್ಲಿಯೇ ಭಾರತದಲ್ಲಿ ಕ್ರೈಸ್ತ ಧರ್ಮ ಪ್ರಚಾರ ಮಾಡಿದವರು

(A) ಸೇಂಟ್ ಪಾಲ್ (B) ಸೇಂಟ್ ಆಂಗ್ನೀಸ್

(C) ಸೇಂಟ್ ಥಾಮಸ್ (D) ಸೇಂಟ್ ಮ್ಯಾಥ್ಯೂಸ್

*ಉತ್ತರ :* ______________________________

7. ಜೊರಾಸ್ಟ್ರಿಯಾನಿಸಂ ಧರ್ಮವು ಭಾರತದಲ್ಲಿ ಹೀಗೆಂದು ಕರೆಯಲ್ಪಡುತ್ತದೆ

(A) ಸೌರಾಷ್ಟ್ರ ಧರ್ಮ (B) ಮೋಸಸ್ ಧರ್ಮ

(C) ಕನ್‌ಫ್ಯೂಷಿಯಸ್ ಧರ್ಮ (D) ಪಾರ್ಸಿ ಧರ್ಮ

*ಉತ್ತರ :* ______________________________

8. ಸಿಂಧು ನದಿ ತೀರದ ಜನರನ್ನು

(A) ಹಿಂದೂಗಳೆಂದು ಕರೆಯಲಾಗಿದೆ (B) ಇಂಡೀಸ್‌ರೆಂದು ಕರೆಯಲಾಗಿದೆ

(C) ಸೈಂಧವರೆಂದು ಕರೆಯಲಾಗಿದೆ (D) ಸೈರಂಧ್ರರೆಂದು ಕರೆಯಲಾಗಿದೆ

*ಉತ್ತರ :* ______________________________

9. ಕಬೀರ್, ಮೀರಾಬಾಯಿ ಮತ್ತು ತುಕಾರಾಮ್‌ರವರು ಹಿಂದೂ ಮುಸ್ಲಿಂರಲ್ಲಿ ಏಕತೆಯನ್ನು ಇದರ ಮೂಲಕ ಮೂಡಿಸಿದರು

(A) ಪವಿತ್ರ ಗ್ರಂಥಗಳು (B) ನೀತಿ ಕಥೆಗಳು

(C) ಶಿಕ್ಷಣ ಪದ್ಧತಿಗಳು (D) ಭಜನೆ ಮತ್ತು ಕೀರ್ತನೆಗಳು

*ಉತ್ತರ :* ______________________________



www.careerindia.com

CAREERINDIA



10. ದೇವೇಂದ್ರನಾಥ ಟಾಗೂರ್, ಅಕ್ಷಯಕುಮಾರ ದತ್ತ ಮತ್ತು ಕೇಶವಚಂದ್ರರು ಪ್ರಚಾರಪಡಿಸಿದ್ದು ಇದರ ತತ್ವಗಳನ್ನು

(A) ಆರ್ಯ ಸಮಾಜ (B) ಬ್ರಹ್ಮ ಸಮಾಜ

(C) ಪ್ರಾರ್ಥನಾ ಸಮಾಜ (D) ಸತ್ಯ ಶೋಧಕ ಸಮಾಜ

*ಉತ್ತರ :* ________________________________

11. ಸಾಮಾನ್ಯ ಆಸಕ್ತಿಯಿಂದ ತಾತ್ಕಾಲಿಕವಾಗಿ ಏರ್ಪಟ್ಟ ವ್ಯಕ್ತಿಗಳ ಅಸಂಘಟಿತ ಸಮೂಹ

(A) ಜನಸಂದಣಿ (B) ಸಮೂಹ

(C) ಧರ್ಮ (D) ಪಂಥ

*ಉತ್ತರ :* ________________________________

12. ಬಂಗಾಳದಲ್ಲಿ ವಿಧವಾ ಮರುವಿವಾಹವನ್ನು ಪ್ರೋತ್ಸಾಹಿಸಿದವರು

(A) ಕೇಶವಚಂದ್ರ ಸೇನ್ (B) ದೊಂಡೂ ಕೇಶವ್ ಕರ್ವೆ

(C) ಈಶ್ವರಚಂದ್ರ ವಿದ್ಯಾಸಾಗರ್ (D) ದೇವೇಂದ್ರನಾಥ ಟಾಗೂರ್

*ಉತ್ತರ :* ________________________________

13. ಮೀರಾಬಾಯಿ ಇವರ ಆರಾಧಕಳು

(A) ಕೃಷ್ಣ (B) ರಾಮ

(C) ನಾರಸಿಂಹ (D) ವೆಂಕಟರಮಣ

*ಉತ್ತರ :* ________________________________

14. ಬಾದಾಮಿಯಲ್ಲಿ ಗುಹಾಂತರ್ಗತ ದೇವಾಲಯಗಳನ್ನು ನಿರ್ಮಿಸಿದವರು

(A) ಚೋಳರು (B) ಪಲ್ಲವರು

(C) ರಾಷ್ಟ್ರಕೂಟರು (D) ಚಾಲುಕ್ಯರು

*ಉತ್ತರ :* ________________________________

15. ಭಾರತದಲ್ಲಿ ಮೊಟ್ಟಮೊದಲ ದೂರದರ್ಶನ ಪ್ರಸಾರ ಕೇಂದ್ರ ಸ್ಥಾಪನೆಗೊಂಡದ್ದು

(A) ಮದ್ರಾಸ್‌ನಲ್ಲಿ (B) ದೆಹಲಿಯಲ್ಲಿ

(C) ಕಲ್ಕತ್ತಾದಲ್ಲಿ (D) ಬಾಂಬೆಯಲ್ಲಿ

www.careerindia.com

CAREERINDIA



*ಉತ್ತರ :* ______________________

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

16. ಕ್ರೈಸ್ತರ ಪವಿತ್ರ ಗ್ರಂಥ ...............................................

17. ಥಿಯೋಸಾಫಿಕಲ್ ಸೊಸೈಟಿ ಭಾರತದಲ್ಲಿ ತನ್ನ ಕೇಂದ್ರ ಕಛೇರಿಯನ್ನು ಹೊಂದಿರುವುದು ..........................

    ...............................................ನಲ್ಲಿ

18. ಹಿಜಿರಾ ಶಕೆ ಆರಂಭವಾದದ್ದು ಕ್ರಿ.ಶ. ...............................................

19. ಸಿಖ್ಖರ ಪವಿತ್ರ ಗ್ರಂಥ ...............................................

20. ವರದಕ್ಷಿಣೆ ವಿರೋಧಿ ಕಾನೂನು ಜಾರಿಗೆ ಬಂದ ವರ್ಷ ...............................................

III. 21. ಈ ಕೆಳಗೆ ಕೊಟ್ಟಿರುವ **A** ಪಟ್ಟಿಯಲ್ಲಿನ ಪದಗಳನ್ನು **B** ಪಟ್ಟಿಯಲ್ಲಿನ ಪದಗಳೊಡನೆ ಹೊಂದಿಸಿ ಬರೆಯಿರಿ : 5 × 1 = 5

| ***A* ಪಟ್ಟಿ** | ***B* ಪಟ್ಟಿ** |
|---|---|
| a) ಸ್ವಾಮಿ ವಿವೇಕಾನಂದ | i) 24ನೇ ತೀರ್ಥಂಕರ |
| b) ಗುರುನಾನಕ್ | ii) ಪಾರ್ಸಿ ಧರ್ಮ |
| c) ಅಹುರಾಮಜ್ದಾ | iii) ರಾಮಕೃಷ್ಣ ಮಿಷನ್ |
| d) ಬುದ್ಧ | iv) ಸಿಖ್ಖರ ಧರ್ಮಗುರು |
| e) ಮಹಾವೀರ | v) ತತಾಗತ |
| | vi) 23ನೇ ತೀರ್ಥಂಕರ |
| | vii) ಸತ್ಯಾರ್ಥ ಪ್ರಕಾಶ |
| | viii) ಜೆಂಡಾವೆಸ್ತಾ |

*ಉತ್ತರಗಳು :* a) ______________________

b) ______________________

c) ______________________

d) ______________________

e) ______________________



www.careerindia.com

CAREERINDIA



IV. ಈ ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರ ಬರೆಯಿರಿ : $9 \times 1 = 9$

22. ಧರ್ಮದ ಅನುಕರಣೆಯಿಂದ ಸಾಮಾಜಿಕ ಐಕ್ಯತೆ ಹೇಗೆ ಉಂಟಾಗುತ್ತದೆ ?

23. ಇಸ್ಲಾಂ ಪದದ ಅರ್ಥವೇನು ?

24. ಜೈನ ಧರ್ಮದ ಎರಡು ಪಂಗಡಗಳಾವುವು ?

25. ಹಿಂದೂ ವಿವಾಹ ಕಾನೂನು ಪ್ರಮುಖವಾಗಿ ಏನನ್ನು ತಿಳಿಸುತ್ತದೆ ?

26. ''ವೇದಗಳಿಗೆ ಹಿಂದಿರುಗಿ'' ಎಂಬ ಘೋಷಣೆಯನ್ನು ನೀಡಿದವರಾರು ?

27. ಭಾರತ ಸಮಾಜದಲ್ಲಿ ಸುಧಾರಣೆ ತಂದ ಆಚಾರ್ಯರನ್ನು ಹೆಸರಿಸಿ.

28. ಏಸು ಕ್ರಿಸ್ತನು ಜನಿಸಿದ್ದು ಎಲ್ಲಿ ?

29. ಬಸವೇಶ್ವರರು ಸ್ಥಾಪಿಸಿದ ಮತ ಯಾವುದು ?

30. ಪೆರೋಲ್ ಎಂದರೇನು ?

www.careerindia.com

CAREERINDIA



V. ಈ ಕೆಳಗಿನ ಪ್ರಶ್ನೆಗಳಿಗೆ **ಎರಡು** ಅಥವಾ **ಮೂರು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $16 \times 2 = 32$

31. ಭಾರತದಲ್ಲಿ ಬಳಕೆಯಲ್ಲಿರುವ ಅಪರಾಧಿಗಳ ಸುಧಾರಣಾ ಮಾರ್ಗಗಳನ್ನು ತಿಳಿಸಿ.

32. ಭಾರತದಲ್ಲಿ ಸಂಸ್ಕೃತೀಕರಣಕ್ಕೆ ಹೆಚ್ಚು ಅವಕಾಶವಿದೆ. ಹೇಗೆ ?

33. ''ನೆರೆಹೊರೆ ಹಳ್ಳಿಗಳಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದಿದೆ''. ಹೇಗೆ ?

34. ಒಂದು ಸಂಘವು ಏರ್ಪಡಲು ಅವಶ್ಯಕವಾದ ಅಂಶಗಳಾವುವು ?

35. ಧರ್ಮವು ದೇಶದ ಪ್ರಗತಿಗೆ ಮಾರಕ. ಹೇಗೆ ?

36. ಹಿಂದೂ ಧರ್ಮದ ಸಾರವನ್ನು ತಿಳಿಸುವ ಪವಿತ್ರ ಗ್ರಂಥಗಳಾವುವು ?

www.careerindia.com

CAREERINDIA



37. ಬುದ್ಧನ ಪ್ರಮುಖ ಉಪದೇಶಗಳೇನು ?

38. ಕ್ರೈಸ್ತ ಧರ್ಮದ ತತ್ವಗಳನ್ನು ತಿಳಿಸಿ.

39. ಮೂಢನಂಬಿಕೆ ಎಂದರೇನು ? ಒಂದು ಉದಾಹರಣೆ ಕೊಡಿ.

40. ಜೀತಪದ್ಧತಿ ಎಂದರೇನು ? ಇದನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮವೇನು ?

41. ಪೌಷ್ಟಿಕ ಆಹಾರದ ಕೊರತೆಯ ದುಷ್ಪರಿಣಾಮಗಳೇನು ?

42. ಭಾರತದಲ್ಲಿ ಅನಕ್ಷರತೆ ಇನ್ನೂ ಮುಂದುವರಿಯುತ್ತಿರಲು ಕಾರಣಗಳೇನು ?

www.careerindia.com

CAREERINDIA



43. ರಾಮಕೃಷ್ಣ ಮಿಷನ್‌ನ ಸಮಾಜ ಸೇವಾ ಕಾರ್ಯಗಳು ಯಾವುವು ?

44. ಬಾಲಾಪರಾಧಿಗಳ ಸುಧಾರಣಾ ಕ್ರಮಗಳು ಯಾವುವು ?

45. ಬ್ರಹ್ಮ ಸಮಾಜದ ಸುಧಾರಣಾ ಕಾರ್ಯಕ್ರಮಗಳಾವುವು ?

46. ಭಾರತೀಯ ಸಂಸ್ಕೃತಿಯು ಸಮೃದ್ಧವಾಗಿ ಬೆಳೆಯಲು ಕಾರಣವೇನು ?

VI. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ **ಐದು** ಅಥವಾ **ಆರು** ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

47. ಆಂಗ್ಲರ ಆಡಳಿತ ಕಾಲದಲ್ಲಿ ಸಾಮಾಜಿಕ ಸುಧಾರಣಾ ಚಳುವಳಿ ನಡೆಯಲು ಕಾರಣಗಳೇನು ?

www.careerindia.com

CAREERINDIA



48. ಸಮಾಜ ಸುಧಾರಣೆಗೆ ಸಮೂಹ ಮಾಧ್ಯಮಗಳು ಹೇಗೆ ಸಹಾಯಕ ?

49. ನಮ್ಮ ದೇಶವನ್ನು ಬಹುವಾಗಿ ಕಾಡುತ್ತಿರುವ ಸಾಮಾಜಿಕ ಪಿಡುಗುಗಳಾವುವು ?

www.careerindia.com

CAREERINDIA



50. ಬಾಲಕಾರ್ಮಿಕರು ಎಂದರೆ ಯಾರು ? ಈ ಪದ್ಧತಿಯ ದುಷ್ಪರಿಣಾಮಗಳೇನು ?

51. ಅಪರಾಧಗಳಿಗೆ ಪರಿಸರವು ಹೇಗೆ ಪರಿಣಾಮ ಬೀರುತ್ತದೆ ?

www.careerindia.com

[ Turn over

CAREERINDIA



52. ನಗರದ ಜನ ಗ್ರಾಮೀಣ ಜನರಿಗಿಂತ, ಸರ್ಕಾರದ ಮೇಲೆ ಒತ್ತಡ ಹೇರಬಲ್ಲ ಶಕ್ತಿಯನ್ನು ಹೊಂದಿರುತ್ತಾರೆ. ಏಕೆ ?

www.careerindia.com

CAREERINDIA



VII. ಈ ಕೆಳಗಿನ ಪ್ರಶ್ನೆಗಳಿಗೆ **ಹತ್ತು** ವಾಕ್ಯಗಳಲ್ಲಿ ಉತ್ತರಿಸಿ : $4 \times 4 = 16$

53. ಪ್ರಾಥಮಿಕ ಹಾಗೂ ಮಾಧ್ಯಮಿಕ ಸಮೂಹಗಳಿಗಿರುವ ವ್ಯತ್ಯಾಸಗಳೇನು ?

54. ಪ್ರತಿಯೊಂದು ಸಮುದಾಯವು ಹೊಂದಿರುವ ಮೂಲ ಆಧಾರಗಳಾವುವು ?

www.careerindia.com

[ Turn over

CAREERINDIA



55. ಪಾರ್ಸಿ ಧರ್ಮದ ತತ್ವಗಳೇನು ?

www.careerindia.com

CAREERINDIA



56. ಮದ್ಯಪಾನ ಮತ್ತು ಮತ್ತಕಾರಕಗಳನ್ನು ನಿಷೇಧಿಸಲು 1956 ಕೇಂದ್ರ ಸಮಿತಿಯ ಶಿಫಾರಸ್ಸುಗಳು ಯಾವುವು ?

www.careerindia.com

www.careerindia.com